**ಸಾಕ್ಷಿಃ ಸಿಡಬ್ಲ್ಯೂಃ 3, ಪಿ.ಡಬ್ಲ್ಯೂಃ 3**

**(ಇಂದು ತಾಃ 10/07/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ  ಆರ್ ಐ ಎನ್ ವಕೀಲರಿಂದ,**

ಇಬ್ಬರು ಜನ ಪಂಚರಲ್ಲಿ ಒಬ್ಬರು ಪಂಚನಾಮೆಯನ್ನು ಬರೆದಮರ ಹಾಗೂ ಇನ್ನೊಬ್ಬ ಪಂಚನಾದ ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ನಾವಿಬ್ಬರೂ ಪಂಚರು ಅಬಕಾರಿ ಇಲಾಖೆಯ ಸಿಬ್ಬಂದಿಗಳು ಆಗಿರುತ್ತೇವೆ. ಘಟನಾ ಸ್ಥಳದಲ್ಲಿ ಆ ಕಾಲಕ್ಕೆ ಬೇರೆ ಯಾರೂ ಖಾಸಗಿ ವ್ಯಕ್ತಿಗಳು ಇರಲಿಲ್ಲ. ಆರೋಪಿಯು ಯಾವ ಕಡೆಯಿಂದ ಯಾವ ಕಡೆಗೆ ಹಾಗೂ ಎಲ್ಲಿಗೆ ಮುದ್ದೆ ಮಾಲನ್ನು ಸಾಗಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಪ್ಲಾಸ್ಟಿಕ್ ಚೀಲ ಹಾಗೂ ಜಪ್ತು ಮಾಡಿದ ಸರಾಯಿ ಪ್ಯಾಕೇಟಿನ ವಿವರಗಳನ್ನು ಪಂಚನಾಮೆಯಲ್ಲಿ ಬರೆದಿರುತ್ತೇವೆ ಆದರೆ ಎಲ್ಲಾ ಸರಾಯಿ ಪ್ಯಾಕೇಟಿನ ಮೇಲಿರುವ ಬ್ಯಾಚ್ ನಂಬರನ್ನು ಬರೆದಿರುವುದಿಲ್ಲ ಕಾರಣ ಅದು ಹರಿದಿರುತ್ತದೆ. ಆ ಸಮಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿತ್ತು. ಆರೋಪಿ ಎಲ್ಲಿಂದ , ಯಾವ ಅಂಗಡಿಯಿಂದ ಮುದ್ದೆಮಾಲನ್ನು ಖರೀದಿ ಮಾಡಿದ್ದರೆಂದು ನನಗೆ ಗೊತ್ತಿಲ್ಲ. ಮುದ್ದೆ ಮಲನ್ನು ಜಪ್ತು ಮಾಡಿದ ಎಷ್ಟು ದಿನದ ನಂತರ ಅದನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲಾಗಿತ್ತು ಎಂದು ನನಗೆ ನೆನಪಿಲ್ಲ. ವಾಹನದಲ್ಲಿ ಯಾವುದೇ ದಾಖಲೆಗಳು ಸಿಕ್ಕಿರುವುದಿಲ್ಲ. ಆರೋಪಿತರಿಗೂ ಮುದ್ದೆಮಾಲಿಗೂ ಯಾವದೇ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ. ಯಾವುದೇ ಜಪ್ತು ಪಂಚನಾಮೆಯನ್ನು ನಾವು ಮಾಡಿಲ್ಲ ಎಂದರೆ ಸರಿಯಲ್ಲ. ಗುನ್ನಾ ಸ್ಥಳದ ಅಕ್ಕಪಕ್ಕದಲ್ಲಿ ಅರಣ್ಯ ಪ್ರದೇಶ ಇದೆ ಎಂದರೆ ಸರಿ. ಪಂಚನಾಮೆಯಲ್ಲಿ ನಿಖರವಾದ ಗುನ್ನಾ ಸ್ಥಳವನ್ನು ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ. ಫೋಟೋವನ್ನು ಚಾಸಾ 2 ರವರು ತೆಗೆದಿರುತ್ತಾರೆ. ಪಂಚನಾಮೆಯಲ್ಲಿ ಹಾಗೂ ನನ್ನ ಹೇಳಿಕೆಯಲ್ಲಿ ಫೋಟೋದಲ್ಲಿ ಕಾಣುತ್ತಿರುವ ಮೈಲಿಗಲ್ಲು ಎಲ್ಲಿಯೂ ನಮೂದು ಮಾಡಿದ್ದು ಇರುವುದಿಲ್ಲ. ಪಿರ್ಯಾದಿದಾರರು ನಮ್ಮ

ಮೇಲಾಧಿಕಾರಿಯಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ.**